ಅಸಲು ದಾವಾ ಸಂಖ್ಯೆ **188/2018** ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **05.11.2025**

ಮು .ಪಾಟೀ ಸವಾಲು ಃ ಶ್ರೀ ಬಿ ಎಸ್ ಪ್ರತಿವಾದಿಯ ಪರ ನ್ಯಾಯಾವಾದಿಗಳಿಂದಃ

ನಮ್ಮ ವಕೀಲರು ಸ್ಥಳಕ್ಕೆ ಬಂದು ಸ್ಥಳ ಪರೀಶಿಲಿಸಿ ವಾದ ಪತ್ರದ ಜೊತೆ ಸಲ್ಲಿಸಿರುವ ಮಾದರಿ ನಕ್ಷೆಯನ್ನು ತಯಾರಿಸಿರುತ್ತಾರೆ. ದಾವಾ ಎ ಯಿಂದ ಕೆ ವರೆಗಿನ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

2. 1 ನೇ ಪ್ರತಿವಾದಿಯು ಕ್ರಯಕ್ಕೆ ಪಡೆದಿರುವ ಸ್ವತ್ತಿನ ಚೆಕ್ಕು ಬಂದಿಯು ನನಗೆ ಗೊತ್ತು. 1 ನೇ ಪ್ರತಿವಾದಿಯು ಕ್ರಯಕ್ಕೆ ಪಡೆದಿರುವ ಪೂರ್ವಕ್ಕೆ ಜವರೇಗೌಡ, ಅಮಾವಸೆಗೌಡ ಮತ್ತು ಪುಟ್ಟೇಗೌಡರವರ ಮನೆ, ಪಶ್ಚಿಮಕ್ಕೆ ನಾರಾಯಾಣಾ ಚಾರ್ ರವರ ಹೊಲ , ಉತ್ತರಕ್ಕೆ ನಮ್ಮ ನಿವೇಶನ ಅದರ ಸಂಖ್ಯೆ ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ಸದರಿ ನಿವೇಶನದಲ್ಲಿ ನಮ್ಮ ಕೊಟ್ಟಿಗೆ ಇರುತ್ತದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಮೊದಲು ಹೊನ್ನೆಗೌಡರ ನಿವೇಶನವಾಗಿತ್ತು ಈಗ ಸದರಿ ನಿವೇಶನದಲ್ಲಿ 2 ನೇ ಪ್ರತಿವಾದಿಯು ಶೆಡ್ ಅನ್ನು ನಿರ್ಮಿಸಿಕೊಂಡಿದ್ದಾರೆ. ಸದರಿ ಶೆಡ್ ನ ದಕ್ಷಿಣಕ್ಕೆ ಅಶ್ವಥ್ ಚಾರ್ ರವರು ಮನೆ ಇರುತ್ತದೆ.

3. 2 ನೇ ಪ್ರತಿವಾದಿಯು ಕ್ರಯಕ್ಕೆ ಪಡೆದಿರುವ ಸ್ವತ್ತಿನ ಚೆಕ್ಕು ಬಂದಿಯು ನನಗೆ ಗೊತ್ತು. ಪೂರ್ವಕ್ಕೆ ಅಮಾವಸೆಗೌಡರವರ ಮನೆ, ಪಶ್ಚಿಮಕ್ಕೆ ರಾಮೇಗೌಡರವರ ಮನೆ, ಉತ್ತರಕ್ಕೆ 1 ನೇ ಪ್ರತಿವಾದಿಯ ಖಾಲಿ ನಿವೇಶನ ಇತ್ತು ಈಗ ಮನೆ ಇರುತ್ತದೆ ಮತ್ತು ದಕ್ಷಿಣಕ್ಕೆ ಅಶ್ವಥ್ ಚಾರ್ ರವರ ಮನೆ ಇದೆ.

4. 14 ಗುಂಟೆಯ ಪೈಕಿ 1 ಮತ್ತು 2 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ ನಂತರ ಇನ್ನು ಉಳಿಕೆ ಎಷ್ಟು ಜಮೀನು ಇದೆ ಎಂಬುದರ ಸಂಬಂಧ ನಾನು ಯಾವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಎಂದು ನನಗೆ ನೆನಪಿಲ್ಲ. ದಾವೆಯನ್ನು ಸಲ್ಲಿಸುವ

ಸಮಯದಲ್ಲಿ ಕ್ರಯಕ್ಕೆ ಕೊಟ್ಟ ಸ್ವತ್ತಿನಲ್ಲಿ ಉಳಿಕೆಯ ಜಮೀನು ಸರ್ವೆ ಜಮೀನಿನಲ್ಲಿ ಮತ್ತು ಗ್ರಾಮಠಾಣಾ ಜಮೀನಿನಲ್ಲಿ ಇರುತ್ತದೆ.

5. 1 ಮತ್ತು 2ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರದಲ್ಲಿ 1ನೇ ಪ್ರತಿವಾದಿಗೆ ಮಾರಾಟ ಮಾಡಿದ ಸ್ವತ್ತಿನ ದಕ್ಷಿಣಕ್ಕೆ ನಮ್ಮ ಉಳಿಕೆ 3 ಗುಂಟೆ ಸ್ವತ್ತು ಇದೆ ಎಂದು ನನ್ನ ತಂದೆ ನನಗೆ ಹೇಳುತ್ತಿದ್ದರು. ದಾವಾ ಜಿ ಶೆಡ್ಯೂಲ್ ಸಿಮೆಂಟ್ ರಸ್ತೆಯು ಪೂರ್ವ-ಪಶ್ಚಿಮವಾಗಿ ಹಾದುಹೋಗಿರುತ್ತದೆ.

6. ದಾವಾ ಜಿ ಶೆಡ್ಯೂಲ್ ಸ್ವತ್ತನ್ನು ರಸ್ತೆಯಾಗಿ ಉಪಯೋಗಿಸುತ್ತಿದ್ದೇವೆ ಎಂದು ತೋರಿಸಲು ಯಾವ ದಾಖಲೆಯನ್ನು ಕೊಟ್ಟಿರುತ್ತೇನೆ ಎಂದು ನಮ್ಮ ವಕೀಲರಿಗೆ ಗೊತ್ತಿರುತ್ತದೆ. ಸದರಿ ರಸ್ತೆಯನ್ನು ನಾನು ಚಿಕ್ಕವನಾಗಿನಿಂದಲೂ ಉಪಯೋಗಿಸುತ್ತಿದ್ದೇವೆ.

7. 1 ಮತ್ತು 2ನೇ ಪ್ರತಿವಾದಿಗಳ ಸ್ವತ್ತಿನ ನಡುವೆ ರಸ್ತೆಯು ಹಾದುಹೋಗಿರುತ್ತದೆ. 1 ಮತ್ತು 2ನೇ ಪ್ರತಿವಾದಿಗಳ ಸ್ವತ್ತಿನ ನಡುವೆ ಯಾವುದೇ ರಸ್ತೆಯು ಇರುವುದಿಲ್ಲ, ನನ್ನ ಪ್ರಕರಣಕ್ಕೆ ಅನುಕೂಲಕ್ಕೆ ತಕ್ಕಂತೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಐ ಮತ್ತು ಜೆ ನಂತೆ ವಿವರಿಸಲಾಗಿರುವ ರಸ್ತೆಯು ಅಸ್ತಿತ್ವದಲ್ಲಿ ಇರುವುದಿಲ್ಲ. ನನ್ನ ಕಲ್ಪನೆ ಮೂಖಾಂತರ ರಸ್ತೆ ಇರುವುದಾಗಿ ಸುಳ್ಳು ಮಾದರಿ ನಕ್ಷೆಯನ್ನು ನಮ್ಮ ವಕೀಲರ ಮೂಖಾಂತರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.ನಿಪಿ.14, 15 ಮತ್ತು 19ನೇ ಪೋಟೋಗಳನ್ನು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ತೆಗೆಸಲಾಗಿರುತ್ತದೆ ಎಂದರೆ ಸರಿ. ನಿಪಿ14, 15 ಮತ್ತು 19 ರಂತೆ ಹಾಜರು ಪಡಿಸಿರುವ ಪೋಟೋದಲ್ಲಿ ಕಾಣುವ ಜಾಗವು ರಸ್ತೆಯಾಗಿರುವುದಿಲ್ಲ, ಒಂದು ವೇಳೆ ರಸ್ತೆಯಾಗಿದ್ದರೆ ಸದರಿ ಜಾಗದಲ್ಲಿ ನಿಪಿ.14, 15 ಮತ್ತು 19ರಲ್ಲಿ ಕಾಣುವಂತೆ ಹುಲ್ಲು ಬೆಳೆದುಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿಯು ಮಳೆಗಾಲದಲ್ಲಿ ಸಾಮಾನ್ಯವಾಗಿ ಸದರಿ ಜಾಗದಲ್ಲಿ ಹುಲ್ಲು ಬೆಳೆಯುವುದಾಗಿ ನುಡಿಯುತ್ತಾರೆ.

9. ಈಗ ತೋರಿಸಿದ ಪೋಟೋಗಳಲ್ಲಿ ಕಾಣುವಂತೆ ಪ್ರತಿವಾದಿಗಳು ಓಡಾಡದಂತೆ ಅಡ್ಡಲಾಗಿ ಸೈಜು ಕಲ್ಲುಗಳನ್ನು ಹಾಕಿ ಪ್ರತಿವಾದಿಗಳಿಗೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಮ್ಮ ನಿವೇಶನದಲ್ಲಿ ಸದರಿ ಸೈಜುಕಲ್ಲುಗಳನ್ನು ಹಾಕಿಕೊಂಡಿರುವುದಾಗಿ ಸಾಕ್ಷಿಯು ನುಡಿಯುತ್ತಾರೆ. ಸದರಿ ಪೋಟೋಗಳನ್ನು ನಿಡಿ.1 ರಿಂದ 5 ಎಂದು ಗುರುತಿಸಲಾಯಿತು. ದಾವಾ ಹೆಚ್ ಶೆಡ್ಯೂಲ್‌ನಲ್ಲಿ ಪೂರ್ವ ಭಾಗದಲ್ಲಿ ಈಗ ತೋರಿಸಿದ ಪೋಟೋದಲ್ಲಿ ಕಾಣುವಂತೆ ಅಡ್ಡಲಾಗಿ ಚಪ್ಪಡಿ ಕಲ್ಲುಗಳನ್ನು ನೆಟ್ಟಿದ್ದೆವು ಎಂದರೆ ಸರಿ. ಸಾಕ್ಷಿ ನೋಡಿ ಒಪ್ಪಿಕೊಂಡ ಪೋಟೋವನ್ನು ನಿಡಿ.6 ಎಂದು ಗುರುತಿಸಲಾಯಿತು. ಸದರಿ ಚಪ್ಪಡಿಕಲ್ಲುಗಳನ್ನು ತೆಗೆದುಹಾಕಿ ಈಗ ತೋರಿಸಿದಂತೆ ಕಟ್ಟಡ ಕಾಮಾಗಾರಿಯನ್ನು ದಾವಾ ಸಲ್ಲಿಸುವ ಸಮಯದಲ್ಲಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಸದರಿ ಚಪ್ಪಡಿ ಕಲ್ಲುಗಳು ಈಗಲೂ ಹಾಗೇ ಇದ್ದು ನಮ್ಮ ಜಾಗದಲ್ಲಿ ಕಟ್ಟಡ ಕಾಮಾಗಾರಿಯನ್ನು ಮಾಡುತ್ತಿರುವುದಾಗಿ ನುಡಿಯುತ್ತಾರೆ ಸದರಿ ಪೋಟೋವನ್ನು ನಿಡಿ.7 ಎಂದು ಗುರುತಿಸಲಾಯಿತು. ಈಗ ತೋರಿಸಿದ ಪೋಟೋದಲ್ಲಿ ಕಾಣುವ ಸಿಮೆಂಟ್ ಬ್ಲಾಕ್ ನಿಂದ ನಿರ್ಮಿಸಿರುವ ಸ್ವತ್ತು ನಮಗೆ ಸೇರಿದ ಸ್ವತ್ತಾಗಿರುತ್ತದೆ ಎಂದರೆ ಸಾಕ್ಷಿಯು ಅದು ಯಾರಿಗೆ ಸೇರಿದ ಎಂದು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಡಿ 8 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ